**O.S** 87/2014 <u>ಡಿಡಬ್ಲ್ಯೂ-1</u>

<u>ದಿನಾಂಕ: 28.02.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ ಬಿ ಜಿ ಆರ್ ವಕೀಲರಿಂದಃ</u>**

ನನ್ನ ತಂದೆ ಮಹಲಿಂಗಪ್ಪನ ತಂದೆ ದತ್ತು ಚಿಕ್ಕೇಗೌಡ 15-20 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ನನ್ನ ತಾತನ ಮರಣ ಪ್ರಮಾಣ ಪತ್ರ ನನ್ನ ಬಳಿ ಇರುತ್ತದೆ. ಅದನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುತ್ತೇನೆ. ಆ ಮರಣ ಪ್ರಮಾಣ ಪತ್ರವನ್ನು ತಹಶೀಲ್ದಾರರ ಕಛೇರಿಯಲ್ಲಿ ಅರ್ಜಿ ಸಲ್ಲಿಸಿ ಪಡೆದು ಕೊಂಡಿದ್ದೇನೆ. ನಾನು ನನ್ನ ತಾತನ ತಂದೆಯ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ತಾತನ ತಂದೆಯ ಮರಣ ಪ್ರಮಾಣ ಪತ್ರವನ್ನು ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿ ತೆಗೆದುಕೊಂಡಿರುತ್ತೇನೆ. ನನ್ನ ತಾತನ ತಂದೆಯ ಮತ್ತು ನನ್ನ ತಾತನ ಮರಣ ದಿನಾಂಕವನ್ನು ತಹಶೀಲ್ದಾರ್ ಕಛೇರಿಯ ರಿಜಿಸ್ಟರ್ ನಲ್ಲಿ ನೊಂದಾವಣೆಯಾಗಿಲ್ಲ ಎಂದರೆ ಸರಿಯಲ್ಲ. ವಾದಿಗಳು ದಾವೆಯನ್ನು ಸಲ್ಲಿಸಿದ ನಂತರ ಮರಣ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ದಾಖಲೆ ಪ್ರಕಾರ 2014 ರಲ್ಲಿ ಪಡೆದುಕೊಂಡಿದ್ದೇವೆ ಎಂದು ಇದೆ ಎಂದರೆ ಸರಿಯಲ್ಲ.

ನಿಡಿ-3 ಸಣ್ಣಪ್ಪನ ಮಗ ಪಟೇಲ್ ಚಿಕ್ಕೇಗೌಡ ಎಂದು ಇದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಸಣ್ಣಜ್ಜನ ಮಗ ಚಿಕ್ಕೇಗೌಡ ಎಂದು ಹೇಳುತ್ತಾರೆ. ಸಣ್ಣಜ್ಜನ ಮಗ ಪಟೇಲ್ ಚಿಕ್ಕೇಗೌಡ ಎಂದರೆ ಯಾರು ಎಂಬ ಪ್ರಶ್ನೆಗೆ ಸಾಕ್ಷಿ ಅವರು ನನ್ನ ಮುತ್ತಾತ ಎಂದು ನುಡಿಯುತ್ತಾರೆ. ಪಟೇಲ್ ಚಿಕ್ಕೇಗೌಡನಿಗೆ ಮಕ್ಕಳು ಇರುವುದಿಲ್ಲ. ಸಾಕ್ಷಿ ಮುಂದುವರೆದು ಗಿರಿಯಮ್ಮ ಮತ್ತು ಪಟೇಲ್ ಚಿಕ್ಕೇಗೌಡ ಇವರಿಗೆ ನಷ್ಟ ಸಂತತಿ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ವಂಶವೃಕ್ಷ ಮತ್ತು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಪಟೇಲ್ ಚಿಕ್ಕೇಗೌಡ ಎಂದು

ಬರೆಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚಿಕ್ಕೇಗೌಡ ಎಂದು ಬರೆಸಿದ್ದೇವೆ ಎಂದು ನುಡಿಯುತ್ತಾರೆ.

ವಾದಿಯರ ಮೂಲ ಪುರುಷ ಪಟೇಲ್ ಚಿಕ್ಕೇಗೌಡ ಎಂದರೆ ಸರಿಯಲ್ಲ. ವಾದಿಯರ ಮೂಲ ಪುರುಷ ಯಾರು ಎಂದು ನನಗೆ ಗೊತ್ತಿಲ್ಲ. ವಾದಿಗಳ ಬಗ್ಗೆಯಾಗಲೀ , ವಾದಿಗಳ ತಂದೆಯರ ಬಗ್ಗೆಯಾಗಲಿ ಅವರ ಮೂಲ ಪುರುಷನ ಬಗ್ಗೆಯಾಗಲೀ ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ಏನು ವಿಷಯ ಇದೆ ಅದನ್ನೇ ಬರೆಸಿದ್ದೇವೆ ಎಂದು ನುಡಿಯುತ್ತಾರೆ. ವಾದಿಗಳ ವಂಶವೃಕ್ಷದಲ್ಲಿ ಇರುವಂತಹ ಹೆಸರುಗಳಲ್ಲಿ ಪಟೇಲ್ ಚಿಕ್ಕೇಗೌಡನ ಹೆಸರನ್ನು ಹೊರತು ಪಡಿಸಿ ಉಳಿದ ಎಲ್ಲಾ ಅಂಶಗಳು ಅದೇ ರೀತಿ ಬರೆಸಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ವಂಶವೃಕ್ಷ ಬರೆಸಿದ್ದೇವೆ ಎಂದು ನುಡಿಯುತ್ತಾರೆ.

ನಿಡಿ-9 ಕ್ಕೂ ವಾದಿಗಳ ಕುಟುಂಬಕ್ಕೂ ಯಾವುದೇ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಸಣ್ಣ ಪಾತೇಗೌಡನ ಮಗ ಸಣ್ಣಪಾತೇಗೌಡ ವಾದಿಗಳ ಮೂಲಸ್ಥ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ನಾನು ಆಗ ಹುಟ್ಟಿಲ್ಲ ಎಂದು ನುಡಿಯುತ್ತಾರೆ. ಚಿಕ್ಕೇಗೌಡ , ಸಣ್ಣಪಾತೇಗೌಡನ ಮಧ್ಯೆ ಏನೇನು ವ್ಯವಹಾರ ಆಗಿದೆ ಎನ್ನುವ ಬಗ್ಗೆ ನನ್ನ ತಂದೆ ನನಗೆ ಹೇಳಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ನಾವು ಬೇರೆ ವಾದಿಯರು ಬೇರೆ ಎಂದು ನಮ್ಮ ಮಧ್ಯೆ ಯಾವುದೇ ವ್ಯವಹಾರ ಆಗಿಲ್ಲ ಎಂದು ನನ್ನ ತಂದೆ ಹೇಳಿರುತ್ತಾರೆ. ಕುಟುಂಬದ ಜಮೀನುಗಳ ವ್ಯವಹಾರದ ಬಗ್ಗೆ ಯಾವುದೇ ವ್ಯವಹಾರವಾಗಿಲ್ಲ ಎಂದು ನನ್ನ ತಂದೆ ಹೇಳಿರುತ್ತಾರೆ. 1991-92 ರ ನಿಡಿ-10 ರ ಪ್ರಕಾರ ಖಾತೆಗಳು ಬದಲಾವಣೆಯಾಗಿಲ್ಲ ಎಂದರೆ ಸರಿಯಲ್ಲ. ಪೌತಿ ವಾರಸು ಮೂಲಕ ಖಾತೆ ಬದಲಾವಣೆಯಾಗಿವೆ ಎಂದರೆ ಸರಿಯಲ್ಲ. ವಾದಿಯರು ದಾವೆಯನ್ನುಸಲ್ಲಿಸಿದ ನಂತರ ಅವರ ಆಸ್ತಿಗಳನ್ನು ಲಪಟಾಯಿಸುವ ಸಲುವಾಗಿ ಕಾನೂನು ಬಾಹಿರವಾಗಿ ಕೆಲವು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು